<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>

<u>ದಕ್ಷಿಣ ಕನ್ನಡ, ಮಂಗಳೂರು</u>

**<u>ಸ್ಪೆಷಲ್ ಕೇಸ್ ನಂಬ್ರ: 11/2022</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿಧಾತ್ | ಚಾಸಾಃ 3 |
| ತಂದೆಯ ಹೆಸರು | : | ಸಂಜೆಯ್ ಆರ್. ಸನಿಲ್ | ಫ್ರಾಸಾಃ 1 |
| ಪ್ರಾಯ | : | 28 ವರ್ಷ | ದಿನಾಂಕಃ 26.09.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಜಿಮ್ ಟ್ರೈನರ್ | |
| ವಾಸಸ್ಥಳ | : | 1-46/7, ಸಾಯಿಸುವಿ ನಿಲಯ, ಶಾಂತಿ ಅಪಾರ್ಟ್‌ಮೆಂಟ್, ನೆಹರು ರಸ್ತೆ, ಜೆಪ್ಪು, ಮಂಗಳೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

ನಾನಗೆ ಚಾಸಾ-4 ಪರಿಚಯ ಇರುತ್ತದೆ. ಸುಮಾರು 5 ವರ್ಷಗಳ ಹಿಂದೆ ನಾನು ಮತ್ತು ಚಾಸಾ-4 ರವರು ಸ್ಟೇಟ್ ಬ್ಯಾಂಕ್ ಹತ್ತಿರ ಇದ್ದಾಗ ಪೊಲೀಸರು ಅಲ್ಲಿಗೆ ಬಂದು ಮಹಜರಿಗೆ ಸಹಕರಿಸಬೇಕು ಎಂದು ಕೇಳಿರುತ್ತಾರೆ. ಅದಕ್ಕೆ ನಾವು ಒಪ್ಪಿ ಮಂಗಳೂರಿನ ಸ್ಟೇಟ್ ಬ್ಯಾಂಕ್ ನ ಹತ್ತಿರ ಇರುವ ಸಿಸಿಬಿ ಕಚೇರಿಗೆ ಹೋಗಿರುತ್ತೇವೆ.

2. ಅಲ್ಲಿ ನಮ್ಮ ಫೊಟೋವನ್ನು ತೆಗೆಯಲಾಗಿರುತ್ತದೆ. ಅಲ್ಲಿ ಮೂರು ಖಾಲಿ ಹಾಳೆಗಳಿಗೆ ಸಹಿ ಮಾಡಿರುತ್ತೇವೆ. ಈಗ ತೋರಿಸಿದ ಮೂರು ದಾಖಲೆಗಳ ಮೇಲೆ ನನ್ನ ಸಹಿಗಳು ಇರುತ್ತದೆ. ಸದರಿ ದಾಖಲೆಗಲ್ಲಿ ಒಂದು ನೋಟೀಸ್ ಆಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಇನ್ನೊಂದು ದಿ. 10.06.2021 ರ ಮಹಜರು ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಇನ್ನೊಂದು ದಿ. 10.06.2021 ರ ಸ್ವತ್ತು ಸ್ವಾಧೀನತ ಮಹಜರು ಆಗಿದ್ದು ಅದನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

3. ಮಹಜರನ್ನು ಯಾವ ಕಾಣಕ್ಕಾಗಿ ಮಾಡಲಾಗುತ್ತಿದೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ನಿಪಿ-1 ರಿಂದ ನಿಪಿ-3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ವಿ.ಸಿ ಯಲ್ಲಿ ಕಾಣಿಸುವ 1ನೇ ಆರೋಪಿಯನ್ನು ನೋಡಿದ್ದಿನೋ ಅಥವಾ

ಇಲ್ಲವೂ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ 1ನೇ ಆರೋಪಿಯಿಂದ ಪೊಲೀಸರು ಏನನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದಲ್ಲಿ 1 ನೇ ಆರೋಪಿಯಿಂದ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಟೇಬಲ್ ಮೇಲೆ ಮೊಬೈಲ್ ಮತ್ತು ಸ್ಟಾಂಪ್ ಗಳು ಇದ್ದವು. ಅವುಗಳು ಎಂಥಹ ಸ್ಟಾಂಪ್ ಗಳು ಎಂದು ನಾನು ಕೇಳಿರುವುದಿಲ್ಲ.

4. ಈಗ ತೋರಿಸಿದ ಪೇಪರ್ ಕವರ್ ಗಳಲ್ಲಿ ಪ್ಯಾಕ್ ಮತ್ತು ಸೀಲ್ ಮಾಡಿ ಅವುಗಳ ಒಂದರ ಮೇಲೆ ನೀಲಿ ಬಣ್ಣದ Redmi ಕಂಪನಿಯ Note 7 ಮೊಬೈಲ್ ಫೋನ್ ಎಂದು ಬರೆದಿದರ ಮೇಲೆ ಮತ್ತು ಇನ್ನೊಂದು ನೋಕಿಯಾ ಕಂಪನಿಯ ಕಿಪ್ಯಾಡ್ ಮೊಬೈಲ್ ಫೋನ್ ಒಂದು ಇದ್ದು ಅವುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ಸಹಿಗಳು ಇರತ್ತವೆ.

5. ನೀಲಿ ಬಣ್ಣದ Redmi ಕಂಪನಿಯ Note 7 ಮೊಬೈಲ್ ಫೋನ್ ಎಂದು ಇರುವ ಪ್ಯಾಕ್ ಮೇಲೆ ಇರುವ ಚೀಟಿಯನ್ನು ನಿಪಿ–4 ಎಂದು ಸಾಕ್ಷಿ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

6. ನೋಕಿಯಾ ಕಂಪನಿಯ ಕಿಪ್ಯಾಡ್ ಮೊಬೈಲ್ ಫೋನ್ ಒಂದು ಎಂದು ಇರುವ ಪ್ಯಾಕ್ ಮೇಲೆ ಇರುವ ಚೀಟಿಯನ್ನು ನಿಪಿ–5 ಎಂದು ಸಾಕ್ಷಿ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

7. (ಸದರಿ ಎರಡು ಪ್ಯಾಕ್‌ಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿರುತ್ತದೆ). ಸಾಕ್ಷಿಯು ನೀಲಿ ಬಣ್ಣದ Redmi ಕಂಪನಿಯ Note 7 ಮೊಬೈಲ್ ಫೋನ್ ನೋಡಿ ಗುರುತಿಸಿದ್ದು ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು.

8. ಸಾಕ್ಷಿಯು ನೋಕಿಯಾ ಕಂಪನಿಯ ಕಿಪ್ಯಾಡ್ ಮೊಬೈಲ್ ಫೋನ್ ನೋಡಿ ಗುರುತಿಸಿದ್ದು ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು.

9. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ).

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

10. ದಿ. 10.06.2021 ರಂದು ನಾನು ಮತ್ತು ಚಾಸಾ–4 ರವರು ಮಂಗಳೂರಿನ ಸಿಟಿ ಆಸ್ಪತ್ರೆಯ ಹತ್ತಿರ ಇದ್ದಾಗ ಪೊಲೀಸರು ಮಹಜರಿಗೆ ಸಹಕರಿಸಬೇಕು ಎಂದು ನಿಪಿ–1 ನ್ನು ನೋಟೀಸ್ ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮನ್ನು ಮಧ್ಯಾಹ್ನ 3.45 ಗಂಟೆಗೆ ತೇಜಸ್ವಿನಿ ಆಸ್ಪತ್ರೆಯ ಬಳಿ ಕರೆದುಕೊಂಡು ಹೋಗಿದ್ದು ಆಗ 1 ನೇ ಆರೋಪಿಯು ಯೂನಿಯನ್ ಬ್ಯಾಂಕ್ ಕಡೆಯಿಂದ ಮೊಟಾರ್ ಸೈಕಲ್ ನಂಬರ್ KL–18–F–3859 ರಲ್ಲಿ ಬಂದಿದ್ದು ಆತನನ್ನು ಪೊಲೀಸರು ಹಿಡಿಯಲು ಪ್ರಯತ್ನಿಸಿದಾಗ ಆತನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಆತನನ್ನು ಪೊಲೀಸರು ಹಿಡಿದಿರುತ್ತಾರೆ ಎಂದರೆ ಸರಿಯಲ್ಲ.

11. 1 ನೇ ಆರೋಪಿಯನ್ನು ವಿಚಾರಿಸಿದಾಗ ಆತನ ಟೀ ಶರ್ಟ್ ನ ಕಿಸೆಯಲ್ಲಿ ಎಲ್.ಎಸ್.ಡಿ ಮಾದಕವಸ್ತು ಇರುತ್ತದೆ ಮತ್ತು ಅದನ್ನು ಮುಂಬೈನ ಅಶ್ವಿನ್ ಎಂಬಾತನಿಂದ ಕೊಂಡುಕೊಳ್ಳಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಪೊಲೀಸರು 1 ನೇ ಆರೋಪಿಗೆ ನಿಮ್ಮ ಅಂಗ ಶೋಧನೆಯನ್ನು ಪತ್ರಾಂಕಿತ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟ್ ಮಾಡಬೇಕೆಂದು ನೋಟೀಸ್ ನ್ನು ಕೊಟ್ಟಾಗ ಆತನು ಅದರ ಮೇಲೆ ಪತ್ರಾಂಕಿತ ಅಧಿಕಾರಿ ಮಾಡಬೇಕು ಎಂದು ಹಿಂಬರಹವನ್ನು ಮಾಡಿ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಆಗ ಪೊಲೀಸರು ನಿಪಿ–2 ರಂತೆ ಮಹಜರನ್ನು ಮಾಡಿ ಸದರಿ ಮೋಟಾರ್ ಸೈಕಲ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

12. ನಂತರ 1 ನೇ ಆರೋಪಿಯನ್ನು ಮತ್ತು ನನ್ನನ್ನು ಪೊಲೀಸರು ಎ.ಸಿ.ಪಿ ಕಚೇರಿಗೆ ಕರೆದುಕೊಂಡು ಹೋಗಿ ಅಲ್ಲಿ 1 ನೇ ಆರೋಪಿಯನ್ನು ಚಾಸಾ–12 ಅವರ ಮುಂದೆ ಹಾಜರುಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ–12 ರವರು ತನ್ನ ಬಗ್ಗೆ ಪರಿಚಯ ಮಾಡಿಕೊಂಡು 1 ನೇ ಆರೋಪಿಯ ಅಂಗ ಶೋಧನೆಯನ್ನು ಮಾಡಿದಾಗ ಆತನ ಶರ್ಟ್ ನ ಕಿಸೆಯಲ್ಲಿ ಮೂರು ದೊಡ್ಡ ಹಾಳೆಗಳು ಕಂಡು ಬಂದಿರುತ್ತದೆ ಮತ್ತು 1 ನೇ ಹಾಳೆಯಲ್ಲಿ 280 ಎಲ್.ಎಸ್.ಡಿ ಸ್ಟ್ಯಾಂಪ್ ಗಳು ಇದ್ದು, 2 ನೇ ಹಾಳೆಯಲ್ಲಿ 420 ಎಲ್.ಎಸ್.ಡಿ ಸ್ಟ್ಯಾಂಪ್ ಗಳು ಇದ್ದು ಮತ್ತು 3 ನೇ ಹಾಳೆಯಲ್ಲಿ 140 ಎಲ್.ಎಸ್.ಡಿ ಸ್ಟ್ಯಾಂಪ್ ಗಳು ಇದ್ದು ಅವುಗಳನ್ನು ತೂಕ ಮಾಡಿದಾಗ 4.75 ಗ್ರಾಂ, 8.1 ಗ್ರಾಂ ಮತ್ತು 2.3 ಗ್ರಾಂ ಕ್ರಮವಾಗಿ ಇದ್ದವು ಎಂದರೆ ಸರಿಯಲ್ಲ.

13. ಅವುಗಳನ್ನೆಲ್ಲಾ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ ಅಮಾನತುಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ಪ್ಯಾಂಟ್ ನ ಬಲ ಕಿಸೆಯಿಂದ Redmi ಮೊಬೈಲ್ ನ್ನು ಮತ್ತು ಪ್ಯಾಂಟ್ ನ ಎಡ ಕಿಸೆಯಿಂದ ನೋಕಿಯಾ ಮೊಬೈಲ್ ನ್ನು ತೆಗೆದು ಚಾಸಾ–12 ರವರ ಮುಂದೆ ಹಾಜರುಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ನಿಪಿ–3 ನ್ನು ಸಂಜೆ 5.45 ರಿಂದ 6.45 ಗಂಟೆಯವರೆಗೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

14. ಈ ಬಗ್ಗೆ ನಾನು ಈಗ ಓದಿ ಹೇಳಿದ ನಿಪಿ–6 ರಂತೆ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

15. ನಾನು ಬಿ.ಎ. ಪದವೀಧರನಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿತ್ತೇನೆ ಎಂದರೆ ಸರಿ. ನಾನು ಖಾಲಿ ಪೇಪರ್ ಗೆ ಸಹಿ ಮಾಡುವುದಿಲ್ಲ ಎಂದರೆ ಸರಿ.

16. ಮಹಜರುಗಳ ಬಗ್ಗೆ ನನಗೆ ಎಲ್ಲಾ ಗೊತ್ತಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ.ಆರ್.ಎ ವಕೀಲರಿಂದ ಶ್ರೀ ಎಂ.ಬಿ ., ವಕೀಲರ ಪರವಾಗಿಃ

ಪಾಟೀ ಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.